ಹಾಕಿಕೊಂಡ ಅನುಭವವನ್ನು ಶ್ಯಾಕೆಟ್ ನೀಡುತ್ತದೆ. ವಿವಿಧ ಬಣ್ಣಗಳಲ್ಲಿ ಸಿಗುವ ಶ್ಯಾಕೆಟ್‌ಗಳು ಕಚೇರಿ ದಿರಿಸಿಗೂ ಹೇಳಿ ಮಾಡಿಸಿದಂತಿವೆ. ಚಕ್ಸ್ ವಿನ್ಯಾಸದ ಶ್ಯಾಕೆಟ್‌ಗಳು ಹೆಚ್ಚು ಆಕರ್ಷಣೀಯ. ಒಳಭಾಗದಲ್ಲಿ ಸ್ಲೀವ್‌ಲೆಸ್ ಟಾಪ್ ಧರಿಸಿದಾಗ ಜಾಕೆಟ್ ರೀತಿಯೂ ಇದನ್ನು ಬಳಕೆ ಮಾಡಬಹುದು. ಇಲ್ಲವೇ ಜೀನ್ಸ್ ಮೇಲೆ ಶರ್ಟ್ ರೀತಿಯೂ ಧರಿಸಬಹುದು. ದೊಗಲೆ ಶ್ಯಾಕೆಟ್ ಧರಿಸಿದರೆ ತೆಳ್ಳಗಿರುವವರೂ ದಪ್ಪನಾಗಿ ಕಾಣಬಹುದು. ಇನ್ನು ದಪ್ಪಗಿರುವವರು ಹೊಟ್ಟೆ ಬೊಜ್ಜು ಭಾಗವನ್ನು ಅಡಗಿಸಲು ಸೂಕ್ತ ಆಯ್ಕೆ ಇದಾಗಿದೆ.



### ತಲೆ, ಕಿವಿ ಬೆಚ್ಚಗಿಡಲು ಹುಡಿ ಜಾಕೆಟ್

ಚಳಿಗಾಲದಲ್ಲಿ ಎಷ್ಟು ಬೆಚ್ಚಗಿದ್ದರೂ ಕಡಿಮೆಯೇ. ತಂಪು ವಾತಾವರಣ ಅಥವಾ ಗಾಳಿಗೆ ತೆರೆದುಕೊಂಡರೆ ಶೀತ, ಕೆಮ್ಮು ಮೈ ಆವರಿಸಬಹುದು. ಇದಕ್ಕಾಗಿಯೇ ಚಳಿಗಾಲದಲ್ಲಿ ಹುಡಿ ಜಾಕೆಟ್‌ಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು. ಜಾಕೆಟ್‌ನೊಂದಿಗೆ ಟೋಪಿಯೂ ಸಂಯೋಜಿತವಾಗಿರುವುದರಿಂದ ಕಿವಿ, ತಲೆಯನ್ನು ಬೆಚ್ಚಗಿಡುತ್ತವೆ. ಬೇಕೆಂದಾಗ ಟೋಪಿಯನ್ನು ತಲೆಗೆ ಹಾಕಿಕೊಳ್ಳಬಹುದು. ಬೇಡವೆಂದಾಗ ಹಿಂದಕ್ಕೆ ಇಳಿಬಿಡಬಹುದು. ಇದೂ ಟ್ರೆಂಡ್ ಸೃಷ್ಟಿಸಿದೆ. ಪ್ರತ್ಯೇಕವಾಗಿ ಟೋಪಿಯನ್ನು ಕೊಳ್ಳುವ ಅಗತ್ಯವಿರುವುದಿಲ್ಲ. ಅಲ್ಲದೆ ಟೋಪಿಯನ್ನು ಎಲ್ಲೆಂದರಲ್ಲಿ ಇಟ್ಟು ಮರೆತುಬಿಡುವ ಸಮಸ್ಯೆಯೂ ಇರುವುದಿಲ್ಲ. ತೆಳ್ಳಗಿರುವವರು ಈ ಹುಡಿ ಜಾಕೆಟ್ ಧರಿಸಿದರೆ ದಪ್ಪಗೆ ಕಾಣಿಸಿಕೊಳ್ಳಬಹುದು.



### ದೊಗಲೆ ಕೋಟ್

ಈಗೆಲ್ಲ ದೊಗಲೆ ದೊಗಲೆ ಬಟ್ಟೆಗಳೇ ಟ್ರೆಂಡ್. ಅದರಲ್ಲೂ ಚಳಿಗಾಲದ ಉಡುಪುಗಳು ಬಹುತೇಕ ದೊಗಲೆಯಾಗೇ ಇರುತ್ತವೆ. ಮೊಣಕಾಲುದ್ದದವರೆಗೆ ಧರಿಸುವ ದೊಗಲೆ ಕೋಟ್ ನೋಡಲು ಆಕರ್ಷಕವಾಗಿ ಕಾಣುತ್ತದೆ. ಹೆಚ್ಚು ಶೀತ ಪ್ರದೇಶದಲ್ಲಿ ಇದನ್ನು ಬಳಸಬಹುದು. ಮೈಗಂಟಿದ ಟೀ ಶರ್ಟ್ ಹಾಗೂ ದೊಗಲೆ ಜೀನ್ಸ್ ಅಥವಾ ಟೈಟ್ ಜೀನ್ಸ್ ತೊಟ್ಟು ಮೇಲೊಂದು ದೊಗಲೆ ಕೋಟ್ ಹಾಕಿದರೆ ಸಖತ್ ಲುಕ್ ನೀಡುತ್ತದೆ. ದೊಗಲೆಯಾಗಿರುವ ಗಿಡ್ಡನೆಯ ಜಾಕೆಟ್ ತೊಡುವುದೂ ಇದೀಗ ಫ್ಯಾಷನ್. ಗಾಢ ಬಣ್ಣದ ಜಾಕೆಟ್‌ಗಳನ್ನು ಕುರ್ತಾ– ಜೀನ್ಸ್, ಸ್ಕರ್ಟ್ ಮೇಲೆ ತೊಟ್ಟು ಚೆನ್ನಾಗಿ ಕಾಣಿಸಿಕೊಳ್ಳಬಹುದು. ಕಾಲೇಜು, ಕಚೇರಿ ದಿರಿಸಿಗೆ, ಸಣ್ಣಪುಟ್ಟ ಪಾರ್ಟಿ ಸಮಯದಲ್ಲಿ ಗಿಡ್ಡನೆಯ ಜಾಕೆಟ್ ಬೆಚ್ಚನೆಯ ಭಾವ ನೀಡುತ್ತದೆ.

### ಬೆಚ್ಚಗಿನ ಪಾದಕ್ಕಾಗಿ ಶೂ ಹಾಕಿ

ಒಣ ಹವೆ, ಗಾಳಿಯಿಂದಾಗಿ ಚಳಿಗಾಲದಲ್ಲಿ ಚರ್ಮ ಮೃದುತ್ವ ಕಳೆದುಕೊಳ್ಳುತ್ತದೆ. ಅದರಲ್ಲೂ ಸದಾ ಗಾಳಿಗೆ ಒಡ್ಡಿಕೊಳ್ಳುವ ಪಾದಗಳ ಕಾಳಜಿ ಅತಿ ಅಗತ್ಯ. ಅಲ್ಲದೆ ಈ ಸಮಯದಲ್ಲಿ ಹಿಮ್ಮಡಿಗಳು ಒಡೆದು ಬಿರುಕು ಬಿಟ್ಟಂತಾಗಿರುತ್ತವೆ. ಎಷ್ಟೇ ಆರೈಕೆ ಮಾಡಿದರೂ ಕೆಲವರ ಪಾದಗಳು ಕೆಟ್ಟದಾಗಿ ಕಾಣುತ್ತಿರುತ್ತವೆ. ಇವುಗಳ ಮರೆಮಾಚುವಿಕೆಗೆ ಹಾಗೂ ಪಾದಗಳ ರಕ್ಷಣೆಗೆ ಶೂ ಧರಿಸುವುದು ಹೆಚ್ಚು ಸೂಕ್ತ. ಈಗೆಲ್ಲ ಪಾದಗಳಿಗಷ್ಟೇ ಅಲ್ಲ ಮೊಣಕಾಲು ಮಟ್ಟದವರೆಗಿನ ಥರಾವರಿ ಶೂಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಚಳಿಗಾಲದಲ್ಲಿ ಶಾರ್ಟ್ ಸ್ಕರ್ಟ್ ತೊಡುವವರಿಗೆ ಈ ಮೊಣಕಾಲು ಮಟ್ಟದ ಬೂಟ್ಸ್ ವರದಾನವಾಗಿವೆ. ವೈಡ್ ಕಾಫ್ ಬೂಟ್ಸ್ ಈಗ ಟ್ರೆಂಡ್‌ನಲ್ಲಿವೆ. ನಿಮಗೆ ಹೊಂದುವ, ಬೂಟ್‌ಗಳನ್ನು ತೊಟ್ಟರೆ ಫ್ಯಾಷನಬಲ್ ಆಗಿ ಕಾಣಬಹುದು.

### ಮ್ಯಾಚ್ ಮಾಡಿಕೊಳ್ಳಿ

ಚಳಿಗಾಲದಲ್ಲಿ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಹೆಚ್ಚು ಅವಕಾಶ ಇರುತ್ತದೆ. ಹೇಗೆ ಎಂದಿರಾ? ಟೋಪಿ, ಸ್ವೆಟರ್, ಶಾಲ್, ಸ್ಟೋಲ್, ಶ್ರಗ್, ಜಾಕೆಟ್, ಮಫ್ಲರ್, ಕೈಗವಸು, ಕಾಲುಚೀಲ ಹೀಗೆ ದೇಹಕ್ಕೆ ವೈವಿಧ್ಯದ ಉಡುಗೆಗಳ ಸಖ್ಯ ಈಗ ಬೇಕೆನಿಸುತ್ತದೆ. ಇವೆಲ್ಲವುಗಳನ್ನೂ ನಮ್ಮ ಉಡುಗೆಗಳೊಂದಿಗೆ ಮ್ಯಾಚ್ ಮಾಡಿಕೊಳ್ಳಬಹುದು.

ಪುಲ್‌ಓವರ್ ಧರಿಸಿದಾಗ ಉಲ್ಲನ್ ಶಾಲ್ ಅನ್ನು ಗುತ್ತಿಗೆಗೆ ಸುತ್ತಿಕೊಳ್ಳಬಹುದು. ಅದು ಚಳಿಯಿಂದ ರಕ್ಷಣೆ ನೀಡುತ್ತದೆ. ಹೀಗೆ ಒಂದೊಂದು ಉಡುಪಿಗೂ ಅದಕ್ಕೆ ತಕ್ಕನಾದ ಮ್ಯಾಚ್ ಮಾಡಿಕೊಳ್ಳಲು ಚಳಿಗಾಲ ಯಾವತ್ತಿಗೂ ತೆರೆದ ಬಾಗಿಲು. ಯಾವುದಕ್ಕೆ ಹೇಗೆ ಮ್ಯಾಚ್ ಮಾಡಿಕೊಳ್ಳಬೇಕು ಎನ್ನುವುದರಲ್ಲಿ ಜಾಣ್ಮೆ ಇರಬೇಕಷ್ಟೇ.

## ಯುವತಿಯರ ಅಚ್ಚುಮೆಚ್ಚು ಪುಲ್‌ಓವರ್

ಧರಿಸಲು ಸುಲಭ, ನಿರ್ವಹಣೆ ಸಮಯ ಕಡಿಮೆ, ಚಂದದ ನೋಟ, ಬೆಚ್ಚಗಿನ ಭಾವ... ಈ ಎಲ್ಲ ಕಾರಣಕ್ಕೆ ಪುಲ್‌ಓವರ್ ಯುವತಿಯರ ಅಚ್ಚುಮೆಚ್ಚಿನ ಉಡುಗೆ. ಜೀನ್ಸ್ ಜೊತೆಗೆ ಪುಲ್‌ಓವರ್ ತೊಟ್ಟರೆ ಸಾಕು ಮೇಲೊಂದು, ಮಗದೊಂದು ಎಂದು ತೊಡುವ ಗೊಡವೆ ಇರುವುದಿಲ್ಲ. ತುಂಬು ತೋಳಿನ, ಅರ್ಧ ತೋಳಿನ ಪುಲ್‌ಓವರ್‌ಗಳು ಚಳಿಗಾಲದಲ್ಲಿ ಆರಾಮದಾಯಕ ಅನುಭೂತಿ ನೀಡುತ್ತವೆ. ಹಾಗಾಗಿ ಕಾಲೇಜು ಹುಡುಗಿಯರು, ಕಚೇರಿಗೆ ಹೋಗುವವರ ಬಳಿ ಪುಲ್‌ಓವರ್‌ಗಳ ಸಂಗ್ರಹ ಇದ್ದೇ ಇರುತ್ತದೆ. ಕತ್ತಿನವರೆಗೂ ಬೆಚ್ಚಗಿಡುವ, ಸೊಂಟದ ಮಟ್ಟಕ್ಕೆ ಇರುವ ಹಾಗೂ ಸೊಂಟದಿಂದ ಕೆಳಭಾಗಕ್ಕೂ ಚಾಚಿರುವ ಪುಲ್‌ಓವರ್‌ಗಳು ಈಗ ಸದ್ದು ಮಾಡುತ್ತಿವೆ.

ಜೀನ್ಸ್, ಕುರ್ತಾ, ಸೀರೆ, ಸ್ಕರ್ಟ್ ಜೊತೆಗೂ ಇವುಗಳನ್ನು ಧರಿಸಬಹುದು. ಸೀರೆಯೊಂದಿಗೆ ಬ್ಲೌಸ್ ಬದಲು ಪುಲ್‌ಓವರ್ ಧರಿಸುವ ಪರಿಪಾಟ ಮೂರ್ನಾಲ್ಕು ವರ್ಷಗಳಿಂದ ಶುರುವಾಗಿದೆ. ತಂಪನೆಯ ವಾತಾವರಣದಲ್ಲಿ ಸೀರೆ ಜೊತೆಗೆ ಬ್ಲೌಸ್ ತೊಟ್ಟರೆ ಥಂಡಿ ಹವಾ ತಪ್ಪಿಸಲು ಸ್ವೆಟರ್ ತೊಡಬೇಕು. ಆಗ ಸೀರೆಯ ಅಂದವೂ ಹದತಪ್ಪುತ್ತದೆ. ಹಾಗಾಗಿ ಸೀರೆಗೆ ಮ್ಯಾಚ್ ಆಗುವ ಪುಲ್‌ಓವರ್ ತೊಟ್ಟರೆ ಅಂದದ ನೋಟ ನೀಡುವುದರಲ್ಲಿ ಅನುಮಾನವಿಲ್ಲ.